# ಪಠ್ಯದೊಳಗಿನ ಮಹಾತ್ಮನಿಗೆ ಹೊಸ ಹುಟ್ಟು ಎಳೆಯರ ಎದೆಯೊಳಗೆ ಗಾಂಧಿಬೀಜದ ಬಿತ್ತನೆ

ಪ್ರಾಥಮಿಕ ಶಾಲೆಯನ್ನು ಕಲಿತ ಮಕ್ಕಳಿಗೆಲ್ಲ ಮಹಾತ್ಮ ಗಾಂಧಿಯ ಸ್ಥೂಲ ಪರಿಚಯವಿರುತ್ತದೆ. ಸತ್ಯ, ಶಾಂತಿ, ಅಹಿಂಸೆ, ತ್ಯಾಗಗಳ ಪ್ರತೀಕವಾಗಿ ಆತನ ಚಿತ್ರ ಮಕ್ಕಳ ಮನಸ್ಸಿನೊಳಗೆ ಮೂಡಿರುತ್ತದೆ. ಆದರೆ, ಮಕ್ಕಳು ಬೆಳೆದಂತೆಲ್ಲ ಅವರೊಳಗಿನ ಗಾಂಧಿಯ ಮೂರ್ತಿಯೂ ಸವಕಳಿಯಾಗುತ್ತ, ಕೊನೆಗೆ ಮಹಾತ್ಮನ ಬದುಕು ನಮ್ಮ ಬದುಕಿಗೆ ಅಥವಾ ಈ ಕಾಲಕ್ಕೆ ಅಪ್ರಸ್ತುತ ಎನ್ನುವ ಭಾವನೆ ಉಂಟಾಗುತ್ತದೆ. ಅಂಥ ಭಾವನೆ ಬಲಿಯಲು ಸಮಕಾಲೀನ ರಾಜಕಾರಣವೂ ಪೂರಕವಾಗಿದೆ. ರಾಜಕಾರಣಪ್ರೇರಿತ ವಿಚಾರಗಳು ಆವರಿಸತೊಡಗಿದಂತೆಲ್ಲ ಈ ಹೊತ್ತಿನ ಸಮಸ್ಯೆಗಳಿಗೆಲ್ಲ ಗಾಂಧಿಯೇ ಕಾರಣ ಎನ್ನುವ ವಾದವೂ ಯುವಜನರಿಗೆ ಪ್ರಿಯವಾಗಿ ಕಾಣಿಸುತ್ತದೆ. ಯಾಕೆ ಹೀಗಾಗುತ್ತದೆ? ಇದಕ್ಕೆ ಕಾರಣ, ತೆಳುವಾದ ಹಾಗೂ ಭಾವುಕ ನೆಲೆಗಟ್ಟಿನಿಂದ ಕೂಡಿರುವ ಗಾಂಧಿಯ ಚಿತ್ರಗಳನ್ನು ಒಳಗೊಂಡಿರುವ ನಮ್ಮ ಪಠ್ಯಪುಸ್ತಕಗಳು, ಮಹಾತ್ಮನನ್ನು ಅನುಸರಣೀಯ ಸಶಕ್ತ ಮಾರ್ಗವನ್ನಾಗಿ ವಿದ್ಯಾರ್ಥಿಗಳಿಗೆ ತಲುಪಿಸುವಲ್ಲಿ ವಿಫಲವಾಗಿರುವುದು.

ಎಲ್ಲ ವಿದ್ಯಾರ್ಥಿಗಳು ಗಾಂಧಿಯ ಆತ್ಮಕಥನ 'ನನ್ನ ಸತ್ಯಾನ್ವೇಷಣೆ' ಹಾಗೂ 'ಹಿಂದ್ ಸ್ವರಾಜ್' ಕೃತಿಗಳನ್ನು ಪಠ್ಯವಾಗಿ ಕಲಿಯುವುದು ಕಡ್ಡಾಯವಾಗಬೇಕು. ಈ ಕೃತಿಗಳ ಓದು, ಗಾಂಧಿಯ ಜೊತೆಗೆ ವೈಯಕ್ತಿಕ ಬದುಕು, ಸಮಾಜ ಹಾಗೂ ದೇಶವನ್ನು ಅರ್ಥ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಗಬಲ್ಲವು.



ಪಠ್ಯಗಳಲ್ಲಿನ ಬಹುತೇಕ ರಚನೆಗಳು ಮಹಾತ್ಮನ ಭೌತಿಕ ಸ್ವರೂಪವನ್ನು ಚಿತ್ರಿಸುವಷ್ಟಕ್ಕೆ ಸಮಾಧಾನ ಪಟ್ಟುಕೊಳ್ಳುತ್ತವೆ. ಆ ಪಠ್ಯಗಳು ಕೋಲು, ಕನ್ನಡಕ, ಗಡಿಯಾರ, ಖಾದಿಗಳ ಮೂಲಕ ಗಾಂಧಿಯನ್ನು ಚಿತ್ರಿಸುತ್ತವೆ. ಸತ್ಯ, ಅಹಿಂಸೆ, ಸೌಹಾರ್ದದ ರೂಪಕವಾಗಿ ಬಿಂಬಿಸುತ್ತವೆ. ಈ ಎಲ್ಲ ಚಿತ್ರಗಳು ಗಾಂಧಿಯ ಬಗ್ಗೆ ಮಕ್ಕಳಲ್ಲಿ ಬೆರಗು ಮೂಡಿಸುತ್ತವೆ; ಆ ಬೆರಗು ಮಹಾತ್ಮನನ್ನು ಗೌರವಪೂರ್ವಕವಾಗಿ ದೂರವಿರಿಸುತ್ತದೆ. ಈಗ ಆಗಬೇಕಿರುವುದು ಗಾಂಧಿಯನ್ನು ಸಮೀಪವಾಗಿಸಿಕೊಳ್ಳುವ ಕ್ರಿಯೆ. ಈ ನಿಟ್ಟಿನಲ್ಲಿ ಗಾಂಧಿಯನ್ನು ಅಸಾಧಾರಣ ವ್ಯಕ್ತಿಯನ್ನಾಗಿ ಪರಿಚಯಿಸುವ ಬದಲು, ಜೀವನಕ್ಕೆ ಅಗತ್ಯವಾದ ಮೌಲ್ಯಗಳ ರೂಪದಲ್ಲಿ ಮಕ್ಕಳಿಗೆ ಹತ್ತಿರವಾಗಿಸುವ ಚಿಂತನೆ ನಡೆಯಬೇಕಾಗಿದೆ. ಇದರ ಭಾಗವಾಗಿ ಗಾಂಧಿ ಪಠ್ಯಗಳ ಪುನರ್ ರಚನೆಯ ಬಗ್ಗೆ ಯೋಚಿಸಬೇಕಾಗಿದೆ. ಸ್ವಾತಂತ್ರ್ಯ ಚಳವಳಿಯಾಚೆಗೂ ಗಾಂಧಿಯನ್ನು ನೋಡಲಿಕ್ಕೆ ಸಾಧ್ಯವಿದ್ದು, ಗಾಂಧಿ ನಮ್ಮ ಜೀವನವಿಧಾನ ಹೇಗಿರಬೇಕು ಅಥವಾ ಯಾವುದಾಗಿರಬೇಕು ಎನ್ನುವುದಕ್ಕೆ ಬಹುದೊಡ್ಡ ಮಾದರಿಯಾಗಿದ್ದಾರೆ.

ಗಾಂಧಿಯನ್ನು ಓದಿ ಅರಿಯುವ ವಿಧಾನವೇ ಅಪೂರ್ಣವಾದುದು. ಗಾಂಧಿ ನಮ್ಮ ಅನುಭವಕ್ಕೆ ದಕ್ಕಬೇಕಾದವರು. ಅಂಥ ಅನುಭವವನ್ನು ಕಲ್ಪಿಸಬೇಕಾದ ಕಮ್ಮಟಗಳಾಗಿ ಶಾಲೆಗಳು ರೂಪುಗೊಳ್ಳಬೇಕಾಗಿದೆ. ಆತ್ಮಕಥೆ ಬರೆಯುವ ಸಂದರ್ಭದಲ್ಲಿ ಗಾಂಧಿಗೆ ತಮ್ಮ ಜೀವನದಲ್ಲಿನ ಬಹುದೊಡ್ಡ ಸಂಘರ್ಷ–ಚಳವಳಿಗೆಲ್ಲ ಪ್ರತ್ಯೇಕ ಘಟನೆಗಳು ಇಲ್ಲವೇ ಸಾಧನೆಗಳಾಗಿ ತೋರದೆ, ಅವೆಲ್ಲವೂ ಸತ್ಯದೊಂದಿಗೆ ತಾವು ಜೀವನಪೂರ್ತಿ ನಡೆಸಿದ ಪ್ರಯೋಗದಂತೆ ಕಾಣಿಸಿದವು. ಆ ಪ್ರಯೋಗಶೀಲತೆಯನ್ನು ನಾವು ಮಕ್ಕಳಿಗೆ ದಕ್ಕಿಸದೆ ಹೋದರೆ, ಗಾಂಧಿಯನ್ನು ಪರಿಚಯಿಸುವ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ.

ಪಠ್ಯದ ಓದಿನ ರೂಪದಲ್ಲಿ ಹಾಗೂ ಪ್ರಾಯೋಗಿಕ ಕಲಿಕೆಯ ರೂಪದಲ್ಲಿ ಮಹಾತ್ಮನನ್ನು ಮಕ್ಕಳಿಗೆ ಮುಟ್ಟಿಸಬೇಕಾಗಿದೆ. ಪ್ರೌಢಶಾಲೆಯವರೆಗೆ ಪ್ರತಿ ತರಗತಿಯಲ್ಲೂ ಮೌಲ್ಯಗಳ ರೂಪದಲ್ಲಿ ಗಾಂಧಿಯನ್ನು ಮಕ್ಕಳಿಗೆ ಮುಖಾಮುಖಿಯಾಗಿಸಬೇಕು. ಪದವಿ ಪಡೆಯುವ ಎಲ್ಲ ವಿದ್ಯಾರ್ಥಿಗಳು ಗಾಂಧಿಯ ಆತ್ಮಕಥನ 'ನನ್ನ ಸತ್ಯಾನ್ವೇಷಣೆ' ಹಾಗೂ 'ಹಿಂದ್ ಸ್ವರಾಜ್' ಕೃತಿಗಳನ್ನು ಪಠ್ಯವಾಗಿ ಕಲಿಯುವುದು ಕಡ್ಡಾಯವಾಗಬೇಕು. ಈ ಎರಡು ಕೃತಿಗಳ ಓದು, ಗಾಂಧಿಯ ಜೊತೆಗೆ ವೈಯಕ್ತಿಕ ಬದುಕು, ಸಮಾಜ ಹಾಗೂ ದೇಶವನ್ನು ಅರ್ಥ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಗಬಲ್ಲವು. ಗಾಂಧಿಯ ಒಲವು ನಿಲುವುಗಳನ್ನು 'ಹಿಂದ್ ಸ್ವರಾಜ್' ತಿಳಿಸಿದರೆ, ಆ ವಿಚಾರಧಾರೆ ಬದುಕಿನೊಂದಿಗೆ ಅನುಸಂಧಾನಗೊಂಡ ಬಗೆಯನ್ನು 'ನನ್ನ ಸತ್ಯಾನ್ವೇಷಣೆ' ಕೃತಿ ಒಳಗೊಂಡಿದೆ. ಇವೆರಡು ಕೃತಿಗಳು ಪ್ರಸಕ್ತ ಸಾಮಾಜಿಕ, ಧಾರ್ಮಿಕ ಬಿಕ್ಕಟ್ಟುಗಳಿಗೆ ಉತ್ತರಗಳನ್ನು ಹೊಳೆಯಿಸುವಂತಿವೆ; ಸಂಪನ್ಮೂಲಗಳ ಸಮನಾದ ಹಂಚಿಕೆ ಹಾಗೂ ಸಹಬಾಳ್ವೆ ಕೇಂದ್ರವಾದ ಆದರ್ಶ ಸಮಾಜ ರೂಪುಗೊಳ್ಳಲು ಅಗತ್ಯವಾದ ನೀತಿಸಂಹಿತೆಯನ್ನು ಪ್ರತಿಪಾದಿಸುತ್ತವೆ. ಪ್ರತಿಯೊಬ್ಬ ಭಾರತೀಯನೂ ಓದಿರಲೇಬೇಕಾದ ಈ ಕೃತಿಗಳನ್ನು ಅನೇಕರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯೂ ಓದಿರುವುದಿಲ್ಲ. ಅದಕ್ಕೆ ಬದಲಾಗಿ ಗಾಂಧಿಯ ಬಗ್ಗೆ ಕಟ್ಟಲಾದ ಕಥೆಗಳನ್ನು ಓದಿ ತಪ್ಪು ಗ್ರಹಿಕೆಗಳನ್ನು ಹೊಂದಿರುತ್ತಾರೆ. ಅಂಥ ಪೂರ್ವಗ್ರಹಗಳನ್ನು ಹೋಗಲಾಡಿಸಲು ಗಾಂಧಿಯೇ ಬರೆದ ಎರಡು ಕೃತಿಗಳನ್ನು ಓದುವುದು ಅಗತ್ಯ.

ಗಾಂಧಿಯನ್ನು ಚಾರಿತ್ರಿಕ ಪೋಷಾಕಿನಿಂದ ಹೊರತಂದು ಸಮಕಾಲೀನ ಬದುಕಿನೊಳಗೆ ಬರಮಾಡಿಕೊಳ್ಳುವುದು ಈ ಹೊತ್ತಿನ ಅಗತ್ಯ. ಆ ಬರ ಮಾಡಿಕೊಳ್ಳುವಿಕೆ ಮಕ್ಕಳ ಮೂಲಕವೇ ಶುರುವಾಗಬೇಕಾಗಿದೆ.

■ ರಘುನಾಥ ಚ.ಹ.